ದಿನಾಂಕ: ಫೆಬ್ರವರಿ ೦೫, ೨೦೧೪

# <u>ಕೋಮು ಗಲಭೆ ಮಸೂದೆ ಮಂಡನೆಗೆ ನನ್ನ ವಿರೋಧವಿದೆ</u>

ಅರುಣ್ ಜೇಟ್ಲಿ
ವಿರೋಧ ಪಕ್ಷದ ನಾಯಕರು(ರಾಜ್ಯ ಸಭಾ)

ಕೋಮು ಗಲಭೆ ನಿಯಂತ್ರಣ(ನ್ಯಾಯ ನೀಡಿಕೆ ಮತ್ತು ಪರಿಹಾರ) ಮಸೂದೆ ೨೦೧೪ ಮಂಡಿಸಲು ಗೃಹ ಸಚಿವರಾದ ಶ್ರೀ ಸುಶೀಲ್ ಕುಮಾರ್ ಶಿಂದೆ ಸದನದ ಗಮನ ಸೆಳೆದರು. ಈ ಪ್ರಕಾರದ ಶಾಸನವನ್ನು ಅನುಮೋದಿಸುವ ಕಾನೂನದತ್ತ ಅರ್ಹತೆಯನ್ನು ಸಂಸತ್ ಹೊಂದಿಲ್ಲವೆಂದು ನಾನು ವಾದಿಸಿದೆ. ಸಂವಿಧಾನದ ಏಳನೆ ಅನುಸೂಚನೆಯಲ್ಲಿ ಪ್ರಸ್ತಾಪಿಸಿದ ಶಾಸನಾತ್ಮಕ ಉಲ್ಲೇಖಗಳ ಆಧಾರದ ಮೇಲೆ ನನ್ನ ವಿರೋಧವನ್ನು ವ್ಯಕ್ತಪಡಿಸಿದೆ. ಏಳನೆ ಅನುಸೂಚನೆಯ ಎರಡನೆ ಪಟ್ಟಿಯು ರಾಜ್ಯಕ್ಕೆ ಸಂಬಂಧಿಸಿದೆ. ಒಂದನೇ ಉಲ್ಲೇಖ ಸಾರ್ವಜನಿಕ ಆದೇಶಗಳಿಗೆ ಸಂಬಂಧಿಸಿದೆ. ಎರಡನೆ ಉಲ್ಲೇಖ ಪೋಲಿಸರಿಗೆ ಮತ್ತು ೪೧ನೇ ಉಲ್ಲೇಖ ರಾಜ್ಯಗಳ ಸಾರ್ವಜನಿಕ ಸೇವೆಗಳನ್ನು ತಿಳಿಸುತ್ತದೆ. ಈ ಎಲ್ಲಾ ವಿಚಾರಗಳು ರಾಜ್ಯಗಳ ಪರಿಧಿಗೆ ಬರುವ ವಿಚಾರಗಳಾಗಿವೆ. ಆದ್ದರಿಂದ ಈ ವಿಚಾರಗಳಲ್ಲಿ ಕೇಂದ್ರ ಸರ್ಕಾರ ಶಾಸನ ರೂಪಿಸಲು ಸಾಧ್ಯವಾಗದು.

ಹೊಸ ಬಗೆಯ ಅಪರಾಧಗಳ ವರ್ಗೀಕರಣವನ್ನು ಮಸೂದೆ ಪ್ರಸ್ತಾಪಿಸುತ್ತದೆ. ಸೂಕ್ಷ್ಮ ಮತ್ತು ಶಾಂತಿ ಕದಡಬಲ್ಲ ವಿಚಾರಗಳಲ್ಲಿ ಆದೇಶ ಮತ್ತು ಪ್ರಕಟಣೆ ಹೊರಡಿಸುವ ಪ್ರಯತ್ನ ಶಾಸನದಲ್ಲಿ ಮಾಡಲಾಗಿದೆ. ಕೋಮು ಗಲಭೆ ನಿಯಂತ್ರಣಕ್ಕೆ ಕ್ರಮಗಳನ್ನು ಸೂಚಿಸಲಾಗಿದೆ. ಸಾರ್ವಜನಿಕ ಶಿಸ್ತು ಕಾಪಾಡುವ ಕರಿತು ವಿಧೇಯಕದಲ್ಲಿ ಒಂದು ಅಧ್ಯಾಯವಿದೆ. ಪರಿಹಾರ ಸೂತ್ರ, ರಾಜ್ಯ ಸರ್ಕಾರದ ಅಧಿಕಾರಿಗಳ ವಿರುದ್ಧ ಕ್ರಮ ಮತ್ತು ದಂಡ ವಿಧಿಸುವ ವಿಧಿವಿಧಾನಗಳನ್ನು ಸೂಚಿಸಲಾಗಿದೆ. ಇವೆಲ್ಲವೂ ರಾಜ್ಯ ಸರ್ಕಾರಕ್ಕೆ ನೀಡಲಾದ ಅಧಿಕಾರಗಳಾಗಿವೆ. ಶಾಸನದ ಅಡಿ ಸೂಚಿಸಲಾದ ಅಧಿಕಾರಗಳು ರಾಜ್ಯ ಸರ್ಕಾರದ ಮೂಲಕವೇ ಜಾರಿಗೆ ಬರುವುದರಿಂದ ಒಕ್ಕೂಟ ವ್ಯವಸ್ಥೆಗೆ ಧಕ್ಕೆ ಬರುವುದಿಲ್ಲವೆಂದು ಕೇಂದ್ರ ಕಾನೂನು ಸಚಿವರು ಪ್ರತಿಕ್ರಯಿಸಿದ್ದಾರೆ. ಶಾಸನಾತ್ಮಕ ಅಧಿಕಾರ ಮತ್ತು ಕಾರ್ಯಾಂಗದ ಅಧಿಕಾರದಲ್ಲಿ ವ್ಯತ್ಯಾಸವಿದೆ ಎಂಬುದು ನನ್ನ ವಾದ. ಕಾನೂನು ರಚಿಸುವುದೇ ಶಾಸಕಾಂಗದ ಅಧಿಕಾರವಾಗಿದೆ. ಆ ಶಾಸಕಾಂಗದ ಪರಿಧಿಯೊಳಗೆ ಅಗತ್ಯ ಕ್ರಮತೆಗೆದುಕೊಳ್ಳುವುದು ಕಾರ್ಯಾಂಗದ ಅಧಿಕಾರವಾಗಿದೆ. ನನ್ನ ಆಕ್ಷೇಪವಿದ್ದಿದ್ದು ಶಾಸಕಾಂಗದ ಅರ್ಹತೆ ಕುರಿತಂತೆ. ಸೂಚಿ ಎರಡು, ಉಲ್ಲೇಖ ೧,೨,೪೧ ಎಲ್ಲವೂ ಕೇಂದ್ರ ಸರ್ಕಾರದ ಪರಧಿಯೊಳಗೆ ಬಾರದ ಕಾರಣ, ಶಾಸನ ರೂಪಿಸುವ ಮೂಲಕ ಅಧಿಕಾರವನ್ನು ರಾಜ್ಯಗಳ ಅಧಿಕಾರಿಗಳಿಗೆ ನೀಡಲಾಗುತ್ತಿದೆ ಎಂದು ಕೇಂದ್ರ ಸರ್ಕಾರ ಹೇಳಲಾಗದು. ಭಾಜಪ ಅಭಿಮತವನ್ನೇ ಬಹುಪಾಲು ವಿರೋಧ ಪಕ್ಷಗಳು ತಾಳಿವೆ. ಆದ್ದರಿಂದಲೇ ಮಸೂದೆ ಮಂಡಿಸುವ ಹಂತದಲ್ಲೇ ಅದನ್ನು ಮುಂದಕ್ಕೆ ಹಾಕುವ ಒತ್ತಡ ಎರಗಿಬಂದಿದೆ.

*****